**SC No.102/2023**
**PW-1**
**CW-1**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ: 57)
ನಮೂನೆ ಸಂಖ್ಯೆ: 4

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **102/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರಾಮಕರಣ ಸಿಂಗ್ | ಪ್ರಾಸಾ: 1 |
| ತಂದೆಯ ಹೆಸರು | : | ರಿಶಾಲ್ ಸಿಂಗ್ | ಚಾಸಾ: 1 |
| ವಯಸ್ಸು | : | 61 ವರ್ಷ | ದಿನಾಂಕ 15.06.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ನಿವೃತ್ತ ಸೈನಿಕ | |
| ವಾಸಸ್ಥಳ | : | ಸರಸ್ವತಿ ನಗರ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-6 ನನ್ನ ಹೆಂಡತಿ. ನನಗೆ ಚಾಸಾ 4, 5, 7 ಮತ್ತು 8 ಗೊತ್ತು. ನನಗೆ ಆರೋಪಿತರ ಪರಿಚಯ ಇರುವುದಿಲ್ಲ. ನಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ಆಗಿರುವುದಿಲ್ಲ. ಆರೋಪಿತರು ನನಗಾಗಲಿ, ಚಾಸಾ 4 ಮತ್ತು 5 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕಲ್ಲು ಮತ್ತು ಬಡಿಗೆಯಿಂದ ಹೊಡೆದು ಹಲ್ಲೆ ಮಾಡಿಲ್ಲ. ಚಾಸಾ 5 ರವರಿಗೆ ಅವಮಾನ ಮಾಡಿರುವುದಿಲ್ಲ. ಆರೋಪಿತರು ಈ ಕೃತ್ಯ ಮಾಡಿರುತ್ತಾರೆ ಎಂದು ಹೇಳಿ ಯಾವುದೇ ಪಿರ್ಯಾದಿಯನ್ನು ನಾನು ಕೊಟ್ಟಿರುವುದಿಲ್ಲ. ಈಗ ನನಗೆ ತೋರಿಸಿದ ಪಿರ್ಯಾದಿಯಲ್ಲಿ ನನ್ನ ಸಹಿ ಇದೆ. ಆ ಪಿರ್ಯಾದಿಯನ್ನು ನಿಪಿ-1 ಎಂದು ಮತ್ತು

ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿದೆ ಎನ್ನುವುದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಘಟನಾ ಸ್ಥಳಕ್ಕೆ ಬಂದು ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ಈ ಘಟನೆಗೆ ಸಂಬಂಧಪಟ್ಟಂತೆ ನಾನು ಪೋಲಿಸರ ಮುಂದೆ ಯಾವುದೇ ಮರು ಹೇಳಿಕೆಗಳನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಅಭಿಯೋಜನೆಯ ಪರ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುವುದು ಕಂಡುಬರುತ್ತದೆ, ಈ ಕಾರಣದಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ

2. ದಿನಾಂಕ 14.02.2019 ರಂದು ರಾತ್ರಿ 11.30 ಗಂಟೆಗೆ ಬೆಳಗಾವಿಯ ಗಣೇಶಪೂರ ಸರಸ್ವತಿ ನಗರದ ಪಾರ್ಥ ರೆಸಿಡೆನ್ಸಿ ಮುಂಭಾಗದಲ್ಲಿ ಆರೋಪಿತರು ಅವರ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದ ಕಾಲಕ್ಕೆ ಚೀರಾಟ ಮಾಡುತ್ತಿದ್ದು ಅದನ್ನು ನಾನು ಮತ್ತು ಚಾಸಾ 4 ಮತ್ತು 5 ರವರು ಪ್ರಶ್ನಿಸಿ ಬುದ್ಧಿವಾದ ಹೇಳಿದಾಗ ಅವರು ನಮ್ಮೊಂದಿಗೆ ಜಗಳ ತೆಗೆದಿದ್ದರು ಎನ್ನುವುದು ನಿಜವಲ್ಲ. ಆರೋಪಿತರು ಚಾಸಾ 4 ಮತ್ತು 5 ರವರನ್ನು ಅಡ್ಡಗಟ್ಟಿ ನಮಗೆ ಅವಾಚ್ಯ ಶಬ್ದಗಳಿಂದ ಬೈದು ನನಗೆ ಕಲ್ಲಿನಿಂದ ಮತ್ತು ಬಡಿಗೆಯಿಂದ ಹೊಡೆದು ಹಲ್ಲೆ ಮಾಡಿ ಕೊಲೆ ಮಾಡುವ ಪ್ರಯತ್ನ ಮಾಡಿದ್ದರು ಎನ್ನುವುದು ನಿಜವಲ್ಲ. ಆರೋಪಿತರು ಚಾಸಾ 4 ಮತ್ತು 5 ರವರನ್ನು ಎಳೆದಾಡಿ ಅವರಿಗೆ ಕಲ್ಲಿನಿಂದ ಹೊಡೆದು ಹಲ್ಲೆ ಮಾಡಿ ಮಾನಭಂಗ ಮಾಡುವ ಪ್ರಯತ್ನ ಮಾಡಿದ್ದರು ಎನ್ನುವುದು ನಿಜವಲ್ಲ. ಈ ಬಗ್ಗೆ ನಾನು ದಿ. 15.02.2019 ರಂದು ಕ್ಯಾಂಪ ಪೋ.ಠಾಣೆಗೆ ಹಾಜರಾಗಿ ನಿ.ಪಿ.1 ರಂತೆ ಒಂದು ಪಿರ್ಯಾದಿಯನ್ನು ಕೊಟ್ಟಿದ್ದೆ ಎನ್ನುವುದು ನಿಜವಲ್ಲ.

3. ಅದೇ ದಿನ ಘಟನೆ ನಡೆದ ಸ್ಥಳಕ್ಕೆ ಪೋಲಿಸರು ಬಂದಿದ್ದಾಗ ನಾನು ಅವರಿಗೆ ಸ್ಥಳವನ್ನು ತೋರಿಸಿಕೊಟ್ಟಿದ್ದೆ ಮತ್ತು ಆ ಸಮಯದಲ್ಲಿ ಚಾಸಾ 2 ಮತ್ತು 3 ರವರು ಇದ್ದು ಪೋಲಿಸರು ಪಂಚನಾಮೆಯನ್ನು ಮಾಡಿ ಕೃತ್ಯಕ್ಕೆ ಸಂಬಂಧಪಟ್ಟ ಇಟ್ಟಿಗೆ ತುಂಡು, ಕಲ್ಲು ಮತ್ತು ಬಡಿಗೆಯನ್ನು ಅಮಾನತು ಪಡಿಸಿಕೊಂಡಿದ್ದರು ಎನ್ನುವುದು ನಿಜವಲ್ಲ. ದಿ. 15.02.2019 ರಂದು ನಾನು ಈ ಬಗ್ಗೆ ಪೋಲಿಸರ ಮುಂದೆ ನಿ.ಪಿ.2ರಂತೆ ಒಂದು ಮರು ಹೇಳಿಕೆಯನ್ನು ಕೊಟ್ಟಿದ್ದೆ ಎನ್ನುವುದು ನಿಜವಲ್ಲ. ನಾನು ಮತ್ತು ಆರೋಪಿತರು ಈಗ ರಾಜೀ ಮಾಡಿಕೊಂಡಿದ್ದೇವೆ ಎನ್ನುವುದು ನಿಜ. ಆ ಕಾರಣಕ್ಕಾಗಿ ಆರೋಪಿತರಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಶ್ರೀ ಎಸ್.ಬಿ.ಎಮ್ ವಕೀಲರಿಂದಃ

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.